# ಮಹಾನ್ ಕಲಾಕಾರನ ದಿವ್ಯದರ್ಶನ

ರಾಜ ಕಲಾವಿದ, ಏಳು ಕಂತುಗಳಲ್ಲಿ ಪ್ರಕಟಗೊಂಡ ಗೀತಾ ಸೀತಾರಾಮ್ ಅವರ ಧಾರಾವಾಹಿ ತುಂಬ ಚೆನ್ನಾಗಿತ್ತು. ಅತ್ಯದ್ಭುತ ಕಲಾಕಾರ ರಾಜಾ ರವಿವರ್ಮರ ಐತಿಹ್ಯಕ್ಕೆ ಲೇಖಕಿ ಸುಂದರವಾದ, ಅಚ್ಚುಕಟ್ಟಾದ ಚೌಕಟ್ಟನ್ನು ಹಾಕಿ ಕೊಟ್ಟಿರುವರು. ವಿಶ್ವವಿಖ್ಯಾತ ಮೇರು ಕಲಾಕಾರ ರವಿವರ್ಮರ ಅಭೂತಪೂರ್ವ ಕಲಾಕೃತಿಗಳ ಪರಿಚಯವಿದ್ದರೂ ಅವರ ಚರಿತ್ರೆಯ ಬಗ್ಗೆ ತಿಳಿದಿರಲಿಲ್ಲ. ಈ ನಿಟ್ಟಿನಲ್ಲಿ ಲೇಖಕಿ ವಿಷಯಗಳನ್ನು ಸಂಗ್ರಹಿಸಿ, ಸುಂದರವಾದ ಹೆಣಿಗೆಯಲ್ಲಿ ಒಗ್ಗೂಡಿಸಿ ಅಭಿವ್ಯಕ್ತಿಸಿರುವುದು ಸ್ತುತ್ಯಾರ್ಹ.

ರವಿವರ್ಮರು ಕೀರ್ತಿ ಶಿಖರವನ್ನೇರಿ ಬ್ರಿಟಿಷರ ಆಳ್ವಿಕೆಯ ಕಾಲಘಟ್ಟದಲ್ಲಿ ರಾಜ ಎಂಬ ಬಿರುದು ಪಡೆದದ್ದು ಹೆಗ್ಗಳಿಕೆಯ ವಿಷಯ. ಬಣ್ಣಗಳಲ್ಲಿ ಕುಂಚವಾಡಿಸುತ್ತಾ ಚಿತ್ರಗಳಲ್ಲಿ ಜೀವಕಳೆ ತುಂಬಿ ನಿಬ್ಬೆರಗು ಮೂಡಿಸುವ ನಿಟ್ಟಿನಲ್ಲಿ ಸೃಷ್ಟಿಸಿರುವರು. ಪತ್ನಿಯ, ಜೀವದಲ್ಲಿ ಜೀವ ಬೆರೆಸಿದ್ದ ಸುಗಂಧಳ ಅಕಾಲಿಕ ಮರಣ, ಸೋದರರಾದ ರಾಜಾವರ್ಮ, ಗೋದಾವರ್ಮರ ಅಗಲಿಕೆಯಿಂದ ಮಾನಸಿಕ ಜರ್ಝರಿತರಾಗಿ, ಅನಾರೋಗ್ಯಕ್ಕೆ ತುತ್ತಾಗಿ ಅಂತ್ಯಕಂಡದ್ದು ಶೋಚನೀಯ.

ಲೇಖಕಿ ಪ್ರತಿಯೊಂದು ಪಾತ್ರಕ್ಕೂ ಕಲ್ಪ ತುಂಬಿರುವರು. ಇಂದಿಗೂ ರಾಜಾ ರವಿವರ್ಮರ ಚಿತ್ರಕೃತಿಗಳು ಅವರ ಪ್ರಬುದ್ಧತೆಯನ್ನು ಬಿಂಬಿಸುವವು. ಮುಂದಿನ ನಾಳೆಗಳಲ್ಲಿ ಅವು ಕೇವಲ ಪಳೆಯುಳಿಕೆಯಾಗದಂತೆ ಜತನದಿಂದ ಸಂರಕ್ಷಿಸಿಕೊಳ್ಳಬೇಕು

— ಪೂರ್ಣಿಮಾ ಮೂರ್ತಿ, ಬೆಂಗಳೂರು



### ಅತ್ಯುತ್ತಮ ಧಾರಾವಾಹಿ

ಧಾರಾವಾಹಿ ಅತ್ಯದ್ಭುತವಾಗಿ ಮೂಡಿಬಂತು. ಆ ಕಲಾವಿದ ರಚಿಸಿರುವ, ವರ್ಣಮಯ, ಚಿತ್ರಗಳೊಂದಿಗೆ 'ಸುಧಾ' ಉಣಬಡಿಸಿದ್ದು ಸಂತೋಷದ ಸಂಗತಿ. ಧಾರಾವಾಹಿಯ ಭಾಷಾ ಶೈಲಿ ಮನಕ್ಕೆ ಮುದ ನೀಡಿತು. ಈ ಧಾರಾವಾಹಿ ಇಷ್ಟು ಬೇಗ ಮುಗಿಯಿತಲ್ಲ ಎಂಬ ಭಾವ ಉಂಟಾಯಿತು. ಸಾಂಸಾರಿಕ ಧಾರಾವಾಹಿಗಳನ್ನು ಓದಿ ಮನಸ್ಸು ಬೇಸರಗೊಂಡಿದ್ದನ್ನು ಈ ಅಪರೂಪ ಧಾರಾವಾಹಿ ಮರೆಮಾಚಿ, ಸಂತಸ ಮೂಡಿಸಿದೆ.

— ಎಸ್. ಪ್ರಭಾ, ಬೆಂಗಳೂರು

### ಆಕರ್ಷಕ ಪೇಂಟಿಂಗ್

ರಾಜ ಕಲಾವಿದ ಧಾರಾವಾಹಿ ತುಂಬ ಚೆನ್ನಾಗಿತ್ತು. ಜೊತೆಗೆ ಪ್ರಕಟಿಸಿದ ರವಿವರ್ಮ ಅವರ ಪೇಂಟಿಂಗ್‌ಗಳೂ ಆಕರ್ಷಕವಾಗಿತ್ತು.

— ಕಮಲಾದೇವಿ ಆರ್.ಎಚ್.

### ಪ್ರತಿವಾರ ಕಾಯುತ್ತಿದ್ದೆ

ಧಾರಾವಾಹಿ ತುಂಬ ಚೆನ್ನಾಗಿ ಮೂಡಿಬಂದಿತು. ರಾಜ ಕಲಾವಿದನಾದ ರವಿವರ್ಮರ ಜೀವನ ಚರಿತ್ರೆಯನ್ನು ಓದಲು ಪ್ರತೀವಾರ ಕಾಯುತ್ತಾ ಕುಳಿತಿರುತ್ತಿದ್ದೆವು.

— ಚಂದ್ರಕಲಾ ಕೆ. ಚನ್ನರಾಯಪಟ್ಟಣ

### ಭಾಷೆ, ಶೈಲಿ

ಕಾದಂಬರಿ ಅದ್ಭುತವಾಗಿದೆ. ಭಾಷೆ, ಶೈಲಿ ಅತ್ಯುತ್ತಮ. ಪ್ರಕಟಿಸಿದ ಸುಧಾಕ್ಕೆ ಧನ್ಯವಾದಗಳು.

— ಅನು, ಶಿವಮೊಗ್ಗ

### ಇನ್ನಷ್ಟು ವಿಸ್ತರಿಸಬಹುದಿತ್ತು...

ಕಾದಂಬರಿ 'ರಾಜ ಕಲಾವಿದ' ಒಂದು ಅಪೂರ್ವ ಪ್ರಯತ್ನ. ಜೊತೆಯಲ್ಲೇ ಮುದ್ರಿಸಿದ ರವಿವರ್ಮರ ಚಿತ್ರಗಳಂತೂ ನಯನ ಮನೋಹರ! ಕಾದಂಬರಿ ಇಷ್ಟುಬೇಗ ಮುಗಿದೇ ಹೋಯಿತೇ? ಇನ್ನಷ್ಟು ಆಳವೂ ಅಗಲವೂ ಆಗಿ ವಿಸ್ತರಿಸಬಹುದಿತ್ತಲ್ಲ ಅನಿಸಿದ್ದು ಸುಳ್ಳಲ್ಲ. ಈ ಕೃತಿ ಸುಧಾ ಪತ್ರಿಕೆಯ ಸತ್ವವನ್ನು ಹಿಮಾಲಯದ ಎತ್ತರಕ್ಕೇರಿಸಿದೆ. ಖಂಡಿತಾ ಆ ಸುಂದರ ಚಿತ್ರಗಳ ಸಲುವಾಗಿ ಎಲ್ಲ ಓದುಗರ ಮನೆಯಲ್ಲಿ ಸಂಗ್ರಹವಾಗಿಯೇ ಉಳಿಯುತ್ತದೆ.

— ಶಾಂತಾ ನಾಗರಾಜ್
ಬೆಂಗಳೂರು

### ಚಲನಚಿತ್ರಕ್ಕೆ ಸೂಕ್ತ

ರಾಜಾ ರವಿವರ್ಮರ ಜೀವನ ಕಥೆಯಾಧಾರಿತ 'ರಾಜ ಕಲಾವಿದ' ಧಾರಾವಾಹಿ ಅದ್ಭುತವಾಗಿ ಮೂಡಿಬಂದಿದೆ. ರವಿವರ್ಮನ ಚಿತ್ರಗಳನ್ನು ಆಸ್ವಾದಿಸಿದವರು ಕೂಡ ಆತನ ಜೀವನ ಚರಿತ್ರೆಯನ್ನು ತಿಳಿದಿರಲಾರರು. ಇಲ್ಲಿಯ ನಿರೂಪಣೆ ಅಚ್ಚುಕಟ್ಟಾಗಿದೆ. ಚಲನಚಿತ್ರಕ್ಕೆ ಸೂಕ್ತವಾದ ಕಾದಂಬರಿ. ನ್ಯಾಯಾಲಯ ಸನ್ನಿವೇಶ ಕೂಡ ಚೆನ್ನಾಗಿ ಮೂಡಿಬಂದಿದೆ. ಕಥೆಗಾರ್ತಿ ಗೀತಾ ಸೀತಾರಾಮ್ ಚಿತ್ರಕಲಾವಿದನ ಜೀವನದ ಪ್ರತಿಯೊಂದು ಅಂಶವನ್ನೂ ಕಲೆಹಾಕಿ ಚೆನ್ನಾಗಿ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ.

— ಕೆ.ಜಿ. ಶ್ರೀಪಾದರಾವ್,
ಉಡುಪಿ

### ನೈಜ ಕಲಾಕೃತಿ

ರಾಜ ಕಲಾವಿದ ಕಾದಂಬರಿ ಅತ್ಯದ್ಭುತವಾಗಿತ್ತು. ಕಲಾವಿದರ ನೈಜ ಕಲಾಕೃತಿಗಳು ರೋಮಾಂಚನ ಉಂಟುಮಾಡುತ್ತಿದ್ದವು. ಪಾತ್ರಧಾರಿಗಳು ತಮ್ಮ ಆತ್ಮನಿವೇದನೆ ಮಾಡಿಕೊಳ್ಳುವ ಪರಿ ಕಥೆಗೆ ವಿಶಿಷ್ಟ ಮೆರುಗನ್ನು ನೀಡಿತು.

— ಕೋಟೇಶ್ವರ ಸೂರ್ಯನಾರಾಯಣರಾವ್
ಬೆಂಗಳೂರು

### ಜೀವನ ಕಥನ

ರಾಜ ಕಲಾವಿದ ಧಾರಾವಾಹಿ ಅತ್ಯುತ್ತಮವಾಗಿತ್ತು. ಕಲಾವಿದ ರವಿವರ್ಮರ ಜೀವನ ಕಥನ ಓದಿ ಸಂತೋಷವಾಯಿತು. ಕಥೆಯೊಂದಿಗೆ ಅವರು ರಚಿಸಿದ ಚಿತ್ರಗಳನ್ನು ಪ್ರಕಟಿಸಿದ್ದು ಸಂಗ್ರಹಯೋಗ್ಯವಾಗಿದೆ. ಆದರೆ ವಿಶ್ವಾಮಿತ್ರ ಮೇನಕೆಯರ ಚಿತ್ರದಲ್ಲಿ ಮೇನಕೆ ಅಪ್ಸರ ಸ್ತ್ರೀಯಂತೆ ಚಿತ್ರಿತವಾಗಿಲ್ಲದಿರುವುದು ವಿಸ್ಮಯವೆನಿಸುತ್ತದೆ. ರವಿವರ್ಮರವರು ಕೋರ್ಟ್‌ನಲ್ಲಿ ಕಲೆಯ ಬಗ್ಗೆ ಮತ್ತು ಕಲಾವಿದರ ಬಗ್ಗೆ ನುಡಿದ ಮಾತು ಇಂದಿನ ಕಲಾವಿದರಿಗೆ ಸ್ಫೂರ್ತಿದಾಯಕವಾಗಿದೆ.

— ಬಿ.ಶೋಭಾ ಅರಸ ತೆಕ್ಕಟ್ಟೆ